<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u>
ಶ್ರೀರಂಗಪಟ್ಟಣ.

ಸಿ.ಸಿ.: 106/2016

ಪಿ. ಡಬ್ಲ್ಯು: 12
ಸಿ. ಡಬ್ಲ್ಯು: 09

ಸಾಕ್ಷಿದಾರರ ಹೆಸರು : ಮಧುಸೂದನ್
ತಂದೆ/ಪತಿಯ ಹೆಸರು : ಕೃಷ್ಣ
ವಯಸ್ಸು : 36 ವರ್ಷ
ವೃತ್ತಿ : ಕೂಲಿ ಕೆಲಸ
ವಾಸ : ಹಾರೋಹಳ್ಳಿ ಗ್ರಾಮ

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 09.01.2023
ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ

ನಾನು ಸಹಿ ಮಾಡಬಲ್ಲೆ. ಸಾಕ್ಷಿಗೆ ದಿ: 30.11.2015 ರ ಪಂಚನಾಮೆ ತೋರಿಸಲಾಗಿ ಅದರಲ್ಲಿ ತನ್ನ ಸಹಿ ಇರುವುದನ್ನು ಒಪ್ಪಿದ್ದು , ಪಂಚನಾಮೆ ಅನ್ನು ನಿಪಿ.8 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.8-ಎ ಎಂದು ಗುರುತಿಸಲಾಯಿತು. ನಿಪಿ.8 ಕ್ಕೆ ನಾನು ಪಾಂಡವಪುರದ ಬಟ್ಟೆ ಅಂಗಡಿಯಲ್ಲಿ ಸಹಿ ಮಾಡಿದ್ದೇನೆ. ನಿಪಿ.8 ಕ್ಕೆ ಯಾವ ಕಾರಣಕ್ಕೆ ಸಹಿ ಮಾಡಿದ್ದೇನೆಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

<u>ಪಾಟಿ ಸವಾಲು: ಮಾನ್ಯ ಸ.ಸ.ಅ ರವರಿಂದ</u>

ದಿ: 30.11.2015 ರಂದು ಮಹದೇವಪುರ ಗ್ರಾಮದ ಹಾಲಿನ ಡೈರಿ ಪಕ್ಕವಿರುವ ಅಂಗನವಾಡಿ ಕೇಂದ್ರದಲ್ಲಿ ಆರೋಪಿ ವಿನೋದ್ ತೋರಿಸಿದ ಸ್ಥಳದಲ್ಲಿ ಪಂಚನಾಮೆ ಕ್ರಮ ಜರುಗಿಸಬೇಕೆಂದು ನನ್ನನ್ನು ಹಾಗೂ ಕಿರಣ್ ರವರನ್ನು ಕೋರಿಕೊಂಡ ಮೇರೆಗೆ ನಾವು ಒಪ್ಪಿದ್ದು ನಂತರ ಆರೋಪಿ ವಿನೋದ್ ತೋರಿಸಿದ ಜಾಗವಾದ ಮಹದೇವಪುರ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಪೋಲೀಸರು ನನ್ನ ಮತ್ತು ಕಿರಣ್ ಸಮಕ್ಷಮ ಸಂಜೆ 05.00-05.30

ಸಮಯದಲ್ಲಿ ನಿಪಿ.8 ಮಹಜರ್ ಅನ್ನು ಬರವಣಿಗೆ ಮಾಡಿದ್ದರು ಮತ್ತು ಆ ಸಮಯದಲ್ಲಿ ನಾನು ನಿಪಿ.8 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿ.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ</u>**

ನಾನು ನಿಪಿ.8 ಕ್ಕೆ ಪಾಂಡವಪುರದ ಬಟ್ಟೆ ಅಂಗಡಿಯಲ್ಲಿ ಸಹಿಮಾಡಿದ್ದೇನೆ. ಸದರಿ ಬಟ್ಟೆ ಅಂಗಡಿಯ ಹೆಸರು ಹೇಳಲಾಗುವುದಿಲ್ಲ. ನಿಪಿ.8 ರಲ್ಲಿನ ಅಂಶಗಳನ್ನು ಪೋಲೀಸರು ನನಗೆ ಓದಿ ತಿಳಿಸಿಲ್ಲ. ನಿಪಿ.8 ಮಾಡುವ ಕಾಲಕ್ಕೆ ಎಷ್ಟು ಜನ ಹಾಜರಿದ್ದರು ಎಂದು ಹೇಳಲಾಗುವುದಿಲ್ಲ. ಪೋಲೀಸರ ಕೋರಿಕೆ ಮೇರೆಗೆ ನಾನು ನಿಪಿ.8 ರ ಸಂಬಂಧ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.